For more job news : www.kpscvaani.com

ಕರ್ನಾಟಕ ಸರ್ಕಾರ
ಕಂದಾಯ ಇಲಾಖೆ

ಸಂಖ್ಯೆ: ಕಂಇ/ಎಜೆಎಸ್‌ಕೆ/ಆಡಳಿತ-82/18-19

ನಿರ್ದೇಶಕರ ಕಾರ್ಯಾಲಯ,
ಆಟಲ್‌ಜೀ ಜನಸ್ನೇಹಿ ನಿರ್ದೇಶನಾಲಯ,
ಕೆ.ಆರ್.ವೃತ್ತ, ಬೆಂಗಳೂರು.
ದಿನಾಂಕ: 29.04.2020.

ಜಿಲ್ಲಾಧಿಕಾರಿಗಳು,
ಚಾಮರಾಜನಗರ, ಚಿಕ್ಕಮಗಳೂರು, ಚಿತ್ರದುರ್ಗ, ದಕ್ಷಿಣ ಕನ್ನಡ,
ಧಾರವಾಡ, ಗದಗ, ಹಾವೇರಿ, ಕೊಪ್ಪಳ, ಮಂಡ್ಯ, ಮೈಸೂರು,
ರಾಯಚೂರು, ರಾಮನಗರ, ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆ.

ಮಾನ್ಯರೇ,

ವಿಷಯ: ರಾಜ್ಯದ ಎಲ್ಲಾ ನಾಡಕಛೇರಿಗಳಿಗೆ ಡೇಟಾ ಎಂಟ್ರಿ ಆಪರೇಟರ್‌ಗಳನ್ನು ಜಿಲ್ಲಾಧಿಕಾರಿಗಳ ಹಂತದಲ್ಲಿ ನೇಮಕಾತಿ ಮಾಡಿಕೊಳ್ಳುವ ಬಗ್ಗೆ ಅಗತ್ಯ ಮಾರ್ಗಸೂಚಿ.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ: ಕಂಇ 67 ಎಜೆಎಸ್ 2018; ದಿನಾಂಕ: 10.12.2018.
2. ನಿರ್ದೇಶನಾಲಯದ ಸಮ ಸಂಖ್ಯೆ ಪತ್ರ ದಿನಾಂಕ: 22.09.2018, 11/20.10.2018, 10.01.2019, 16.10.2019.
3. ಸರ್ಕಾರದ ಪತ್ರ ಸಂಖ್ಯೆ: ಕಂಇ 24 ಎಜೆಎಸ್ 2019; ದಿನಾಂಕ: 04.10.2019.

•••••

ರಾಜ್ಯದ ಎಲ್ಲಾ ಆಟಲ್‌ಜೀ ಜನಸ್ನೇಹಿ ಕೇಂದ್ರಗಳಿಗೆ ಡೇಟಾ ಎಂಟ್ರಿ ಆಪರೇಟರ್‌ಗಳನ್ನು ನೇಮಕ ಮಾಡುವ ಹೊರಗುತ್ತಿಗೆ ಆಧಾರದ ನೇಮಕಾತಿಯ ವಿಕೇಂದ್ರೀಕೃತ ಅಧಿಕಾರವನ್ನು ಆಯಾ ಜಿಲ್ಲಾಧಿಕಾರಿಗಳಿಗೆ ವಹಿಸಿ, ಇದಕ್ಕೆ ಸಂಬಂಧಪಟ್ಟಂತೆ ಜಿಲ್ಲಾ ಮಟ್ಟದಲ್ಲಿ ಟೆಂಡರ್‌ನ್ನು ಕರೆಯುವ ಪ್ರಾಧಿಕಾರಿಯನ್ನಾಗಿ ಹಾಗೂ ಇ-ಟೆಂಡರ್ ಅಂತಿಮಗೊಳಿಸುವ ಹಾಗೂ ಇನ್ನಿತರೆ ಅನುಮೋದನೆಯನ್ನು ನೀಡಲು, ಜಿಲ್ಲಾಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜನೆ ನೀಡಿ ಉಲ್ಲೇಖ [1] ರ ಸರ್ಕಾರದ ಆದೇಶದ ಮೇರೆಗೆ, ಡೇಟಾ ಎಂಟ್ರಿ ಆಪರೇಟರ್‌ಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವ ಬಗ್ಗೆ ಈಗಾಗಲೇ ಇ-ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಿರುವ ಹಾಗೂ ಮುಂದಿನ ದಿನಗಳಲ್ಲಿ ಇ-ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುವ ಎಲ್ಲಾ ಜಿಲ್ಲೆಗಳಲ್ಲಿ ಸರ್ಕಾರದ ಆದೇಶದಂತೆ ಸಮಿತಿಯನ್ನು ರಚನೆ ಮಾಡಿಕೊಂಡು ಕ್ರಮವಹಿಸುವಂತೆ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನಾಲಯದ ಉಲ್ಲೇಖ [2] ರ ಪತ್ರಗಳಲ್ಲಿ ನಿರ್ದೇಶನ ನೀಡಿ, ನಿರ್ದೇಶನಾಲಯದಿಂದಲೇ ಕೇಂದ್ರೀಕೃತವಾಗಿ ಮಾದರಿ/ಕರಡು ಟೆಂಡರ್ ದಾಖಲೆಯನ್ನು ಸಿದ್ಧಪಡಿಸಿ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಕಳುಹಿಸಲಾಗಿರುತ್ತದೆ.

ಸದರಿ ಟೆಂಡರ್ ದಾಖಲೆಯನ್ವಯ, ರಾಜ್ಯದ ಎಲ್ಲಾ ಹೋಬಳಿ ಮಟ್ಟದಲ್ಲಿರುವ 769 ನಾಡಕಛೇರಿಗಳಿಗೆ ತಲಾ ಒಬ್ಬರಂತೆ ಹಾಗೂ ಸರ್ಕಾರದಿಂದ ಅನುಮೋದನೆಯಾಗಿರುವಂತೆ ಒಬ್ಬ ಹೆಚ್ಚುವರಿ ಆಪರೇಟರ್ (769*2=1538), 122 ಫ್ರಂಟ್ ಆಫೀಸ್‌ಗಳಿಗೆ ತಲಾ ಒಂದು, 226 ತಾಲ್ಲೂಕು ಕಸಬಾ ಕೇಂದ್ರಗಳಲ್ಲಿ ಆರ್‌ಟಿಸಿ ವಿತರಣೆಗಾಗಿ ತಲಾ ಒಂದು ಹೆಚ್ಚುವರಿ ಆಪರೇಟರ್ ಹಾಗೂ 30 ಸ್ಪಂದನ ಕೇಂದ್ರಗಳಿಗೆ ತಲಾ ಒಬ್ಬರಂತೆ, ಅನುಬಂಧ-I ರಲ್ಲಿ ತಿಳಿಸಿರುವಂತೆ, ಒಟ್ಟು 1916 ಡೇಟಾ ಎಂಟ್ರಿ ಆಪರೇಟರ್‌ಗಳನ್ನು ನೇಮಿಸಿಕೊಳ್ಳಲು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿರುತ್ತದೆ.

Scanned by CamScanner

Scanned with CamScanner

For more job news : www.kpscvaani.com

ಅನುಬಂಧ-2

ಅಟಲ್‌ಜೀ ಜನಸ್ನೇಹಿ ಕೇಂದ್ರಗಳಿಗೆ ಸಾರ್ವಜನಿಕರಿಗೆ ಸೇವೆಗಳಿಗಾಗಿ ಹೊಸದಾಗಿ ಆಧಾರದ ಮೇಲೆ ಜೋಡಿಸಿಕೊಳ್ಳಬೇಕಾಗಿರುವ ದೇಶಾ ಏಂಟ್ರಿ ಆಪರೇಟರ್‌ಗಳ ಜಿಲ್ಲಾವಾರು ವಿವರ.

ಕ್ರ. ಸಂ	ಜಿಲ್ಲೆ	ಈ ಹಿಂದೆ ಜಿಲ್ಲಾವಾರು ಮಾಡಿರುವ ಬೆಂಗಳೂರು ದಾಖಲೆಯಲ್ಲಿ ಸಮೂಹಿಸಿರುವ ದೇಶಾ ಏಂಟ್ರಿ ಆಪರೇಟರ್‌ಗಳ ಸಂಖ್ಯೆ	ಪ್ರಸ್ತುತ ಕಾರಣಗಳಿಗೆ (Rationalise ಮಾಡಿರುವಂತೆ) ಜೋಡಿಸಿಕೊಳ್ಳಬೇಕಾಗಿರುವ ದೇಶಾ ಏಂಟ್ರಿ ಆಪರೇಟರ್‌ಗಳ ವಿವರ				
			ರೆಗ್ಯುಲರ್ ದೇಶಾ ಏಂಟ್ರಿ ಆಪರೇಟರ್‌ಗಳ ಸಂಖ್ಯೆ	ಕಾರ್ಯ ನಿರ್ವಹಿಸುತ್ತಿರುವ ಫ್ರಂಟ್ ಆಫೀಸ್ ದೇಶಾ ಏಂಟ್ರಿ ಆಪರೇಟರ್‌ಗಳ ಸಂಖ್ಯೆ	ಕರ್ನಾಟಕ ಸಾರ್ವಜನಿಕರಿಗೆಲ್ಲಿ ಪಡಿತರ ವಿತರಣೆಯ ದೇಶಾ ಏಂಟ್ರಿ ಆಪರೇಟರ್‌ಗಳ ಸಂಖ್ಯೆ	ಸ್ಕಂದನ ದೇಶಾ ಏಂಟ್ರಿ ಆಪರೇಟರ್‌ಗಳ ಸಂಖ್ಯೆ	ಜೋಡಿಸಿಕೊಳ್ಳಬೇಕಾಗಿರುವ ಒಟ್ಟು ದೇಶಾ ಏಂಟ್ರಿ ಆಪರೇಟರ್‌ಗಳ ಸಂಖ್ಯೆ
1	ಬಾಗಲಕೋಟೆ	51	18	5	9	1	33
2	ಬಳ್ಳಾರಿ	71	31	5	11	1	48
3	ಬೆಂಗಳೂರು (ಗ್ರಾ)	39	17	0	4	1	22
4	ಬೆಳಗಾವಿ	110	35	24	14	1	74
5	ಬೆಂಗಳೂರು (ದ)	76	27	8	5	1	41
6	ಬೀದರ್	68	29	1	8	1	39
7	ಚಾಮರಾಜನಗರ	41	16	0	5	1	22
8	ಚಿಕ್ಕಬಳ್ಳಾಪುರ	60	26	0	6	1	33
9	ಚಿಕ್ಕಮಗಳೂರು	78	34	1	8	1	44
10	ಚಿತ್ರದುರ್ಗ	54	22	2	6	1	31
11	ದಕ್ಷಿಣ ಕನ್ನಡ	44	17	2	7	1	27
12	ದಾವಣಗೆರೆ	65	20	5	6	1	32
13	ಧಾರವಾಡ	40	14	3	6	1	24
14	ಗದಗ	32	11	2	7	1	21
15	ಹಾಸನ	90	38	2	8	1	49
16	ಹಾವೇರಿ	52	19	5	8	1	33
17	ಕಲಬುರಗಿ	80	32	4	11	1	48
18	ಕೊಡಗು	36	16	0	3	1	20
19	ಕೋಲಾರ	62	27	1	6	1	35
20	ಕೊಪ್ಪಳ	48	20	0	7	1	28
21	ಮಂಡ್ಯ	100	45	2	7	1	55
22	ಮೈಸೂರು	80	33	5	8	1	47
23	ರಾಯಚೂರು	82	37	0	7	1	45
24	ರಾಮನಗರ	42	18	0	4	1	23
25	ಶಿವಮೊಗ್ಗ	90	37	7	7	1	52
26	ತುಮಕೂರು	111	50	0	10	1	61
27	ಉಡುಪಿ	26	9	1	6	1	17
28	ಉತ್ತರ ಕನ್ನಡ	87	35	4	12	1	52
29	ವಿಜಯಪುರ	62	20	9	12	1	42
30	ಯಾದಗಿರಿ	39	16	0	6	1	23
ಒಟ್ಟು		1916	769	98	224	30	1121

ನಿರ್ದೇಶಕರು,

ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯ.

Scanned by CamScanner

Scanned with CamScanner